ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 24.07.2024.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ:**

ನನ್ನ ಗಂಡ ಕಾಣೆಯಾದ ನಂತರ ನಾನು ಪ್ರತಿವಾದಿಗಳ ಜೊತೆಯೇ ಒಟ್ಟಾಗಿ ಇರುತ್ತಿದ್ದೆ ಎಂದರೆ ಸರಿಯಲ್ಲ. ಈ ಪ್ರಕರಣ ಮಾಡುವ ಉದ್ದೇಶಂದಿಲೇ ನಾನು ನನ್ನ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ತವರು ಮನೆಯಲ್ಲಿ ನನ್ನ ಗಂಡ ಹೋದ ನಂತರ, ಅಲ್ಲಿಯೇ ವಾಸವಾಗಿರುತ್ತೇನೆ ಎಂದು ತೋರಿಸಲು, ಪಡಿತರ ಚೀಟಿ ಮತ್ತು ಆಧಾರ ಕಾರ್ಡ್ ಕೊಟ್ಟಿರುತ್ತೇನೆ. ಅದೇ ರೀತಿ ನಾನು ಮತದಾರ ಯಾದಿಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲೆ ಹಾಜರುಪಡಿಸದೇ ಇದ್ದರೂ ಕೂಡಾ, ನನ್ನ ಗಂಡ ಹೋದ ನಂತರ ನಾನು ನನ್ನ ತವರು ಮನೆಯಲ್ಲಿ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಹೆಸರಿನಲ್ಲಿರುವ ಜಮೀನುಗಳನ್ನು ಅವರೇ ಸಾಗುವಳಿ ಮಾಡಿಕೊಂಡು ಇದ್ದಾರೆ ಎಂದರೆ ಸರಿ. ನನ್ನ ಬಾವ ಮತ್ತು ನನ್ನ ಗಂಡನ ತಮ್ಮನ ಹೆಸರಿನಲ್ಲಿಯು ಕೂಡಾ ಆಸ್ತಿಗಳು ಇವೆ ಎಂದರೆ ಸರಿ. ನನ್ನ ಬಾವ ಮತ್ತು ಮೈದುನ ಹೆಸರಿನಲ್ಲಿರುವ ಆಸ್ತಿಗಳನ್ನು ಅವರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಬಾವ ಮತ್ತು ಮೈದುನರು ತಮ್ಮ ಹೆಸರಿನಲ್ಲಿರುವ ಜಮೀನುಗಳನ್ನು ಬೇರೆಯವರ ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಅದರಲ್ಲಿ ಬಂದ ಆಧಾಯದಿಂದ ಸ್ವಂತಾಗಿ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಬಾವ ಮತ್ತು ಮೈದುನರು ಒಕ್ಕಲುತನ ಹೊರತುಪಡಿಸಿ ಬೇರೆ ಯಾವುದೇ ಉದ್ಯೋಗ ಮಾಡುವುದಿಲ್ಲ ಎಂದರೆ ಸರಿ.

ಸದರಿ ಒಕ್ಕಲುತನದ ಮೇಲೆಯೇ ತಮ್ಮ ಹೆಸರಿನಲ್ಲಿರುವ ಆಸ್ತಿಗಳನ್ನು ಸ್ವಂತ ಖರೀದಿಗೆ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಬಾವ ಮತ್ತು ಮೈದುನರು ತಮ್ಮ ಹೆಸರಿನಲ್ಲಿರುವ ಆಸ್ತಿಗಳನ್ನು ಖರೀದಿ ಹಿಡಿಯಲು ಜಂಟಿ ಕುಟುಂಬದ ಆಧಾಯವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಬಾವ ಮತ್ತು ಮೈದುನರು ಖರೀದಿಸಿದ ಜಮೀನುಗಳು ಅವರ ಸ್ವಂತ ಹಣದಿಂದ ಖರೀದಿಸಿದ್ದು, ನನಗೆ ಗೊತ್ತಿದ್ದರೂ ಕೂಡಾ ನಾನು ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ,

ನನ್ನ ಬಾವ ಮತ್ತು ಮೈದುನರ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿ ಹಿಡಿಯಲು ಆರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಾವ 1 ನೇ ಪ್ರತಿವಾದಿ ಹೆಸರಿನಲ್ಲಿರುವ ಜಮೀನುಗಳನ್ನು ಪ್ಲಾಟ್ ಮಾಡಿ ಹಾಗೂ ಅವುಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ, ನನ್ನ ಬಾವ ಮತ್ತು ಮೈದುನರು ತಮ್ಮ ಹೆಸರಿನಲ್ಲಿ ದಾವಾ ಸ್ವತ್ತುಗಳನ್ನು ಖರೀದಿಸಿರುತ್ತಾರೆ ಎಂದು ತೋರಿಸಲು, ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನನ್ನ ಗಂಡ ಹೋದ ನಂತರ ಪ್ರತಿವಾದಿಯರ ಜೊತೆ ವಾಸಿಸುತ್ತಿದ್ದು, ಈ ಕೇಸ್ ಮಾಡುವ ಸಲುವಾಗಿ ನಾನು ತವರು ಮನೆಗೆ ಹೋಗಿರುತ್ತೇನೆ ಹಾಗೂ ನಾನು ತವರು ಮನೆಯಲ್ಲಿದ್ದಾಗ, ಯಾವತ್ತು ನನ್ನ ಜೀವನ ನಿರ್ವಹಣೆಗೆ ಪ್ರತಿವಾದಿಯರನ್ನು ಕುರಿತು ಜೀವನಾಂಶ ಕೇಳಿಲ್ಲ ಎಂದರೆ, ಸಾಕ್ಷಿ ನಾನು ಕೇಳಲು ಹೋದಾಗ ನನಗೆ ಹೊಡೆಯುವುದು ಬಡೆಯುವುದು ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ಪ್ರತಿವಾದಿಯರು ನನಗೆ ಯಾವತ್ತು ತೊಂದರೆ ಕೊಡದೇ ಇದ್ದರೂ ಕೂಡಾ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಕೂಡಾ ಪ್ರತಿವಾದಿಯರು ಕರೆದುಕೊಂಡು ಹೋಗಿ ಚೆನ್ನಾಗಿ ನೋಡಿಕೊಳ್ಳಲು ತಯಾರು ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಇವತ್ತಿನವರೆಗೂ ತಿರಿಕೊಂಡ ಬಗ್ಗೆ ಯಾವುದೇ ದಾಖಲೆ ಇರದೇ ಇರುವ ಕಾರಣ, ನನಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೇಳಲು, ಕಾನೂನು ಬದ್ಧವಾಗಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ 20-30 ವರ್ಷಗಳ ಹಿಂದೆ ಕಾಣೆಯಾಗಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದು, ಆದರೆ ನನ್ನ ಗಂಡ ನನ್ನನ್ನು 2-3 ತಿಂಗಳಿಗೊಮ್ಮೆ ನನ್ನ ತವರು ಮನೆಗೆ ಬಂದು

ಬೇಟಿಯಾಗುತ್ತಿದ್ದಾನೆ ಎಂದರೆ ಸರಿಯಲ್ಲ. ನಾನು ನನ್ನ ತವರು ಮನೆಯವರ ಮಾತು ಕೇಳಿ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**